ಯಮ 334ರಮೇರೆಗೆ

1 ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿಗೆ 87-88ನೇ ಸಾಲಿನಲ್ಲಿ ಐ. ಆರ್. ಡಿ.ಪಿ ಯೋಜನೆಯನ್ವಯ ಫಲಾನುಭವಿಗಳ ಸಂಖ್ಯೆಯನ್ನು ಕಡಿಮೆ ಮಾಡಿರುವುದರ ಬಗ್ಗೆ

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲಾ ಪರಿಷತ್‌ಗೆ ೧೯೮೭-೮೮ನೇ ಸಾಲಿಗೆ ರಾಷ್ಟ್ರೀಯ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಲ್ಲಿ (ಐಆರ್‌ಡಿಪಿ) ನಿಗದಿಗೊಳಿಸಿದ ಹೊಸ ಮತ್ತು ಹಳೆಯ ಫಲಾನುಭವಿಗಳ ಕ್ರಿಯಾ ಯೋಜನೆಯಂತೆ ಮೊದಲು ನಿಗದಿಗೊಳಿಸಿದ ಫಲಾನುಭವಿಗಳ ಸಂಖ್ಯೆಯನ್ನು ಕಡಿತಗೊಳಿಸಿ ಜಿಲ್ಲಾ ಪರಿಷತ್ತಿಗೆ ಬರುವ ಎಲ್ಲಾ ಮಂಡಲ ಪಂಚಾಯ್ತಿಗಳಿಗೆ ಮಾರು ಕ್ರಿಯಾ ಯೋಜನೆಯಂತೆ ಹೊಸ ಮತ್ತು ಹಳೆಯ ಫಲಾನುಭವಿಗಳನ್ನು ಗುರುತಿಸಿ ಹಚ್ಚಲು ಸರ್ಕಾರ ಆದೇಶ ನೀಡಿದೆ ಎಂದು, ಫಲಾನುಭವಿಗಳ ಸಂಖ್ಯೆಯನ್ನು ಕಡಿಮೆ ಮಾಡಿದೆ ಎಂದು ತಿಳಿದು ಬರುತ್ತದೆ. ಇದರ ಕಾರಣವೇನು ? ಪ್ರತಿ ೧೯೮೭-೮೮ನೇ ಸಾಲಿಗೆ ಕರ್ನಾಟಕ ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ರಾಷ್ಟ್ರೀಯ ಸಮಗ್ರ ಗ್ರಾಮೀಣ ಅಭಿವೃದ್ಧಿಗೆ ನೀಡಿದ ಹಣವೆಷ್ಟು ಇದರಲ್ಲಿ ದಕ್ಷಿಣ ಕನ್ನಡಜಿಲ್ಲಾ ಪರಿಷತ್‌ಗೆ ರಾಜ್ಯದಿಂದ ಬಿಡುಗಡೆ ಮಾಡಿರುವ ಹಣವೆಷ್ಟು? ಅಲ್ಲದೆ ಕಳೆದ ಮೂರು ವರ್ಷಗಳಿಂದ ಎನ್.ಆರ್.ಇ.ಪಿ ಯೋಜನೆಯಲ್ಲಿ ಕಾಮಗಾರಿಗಳಿಗಾಗಿ ಕ್ರಿಯಾ ಯೋಜನೆಯನ್ನು ತಯಾರಿಸಿದರೂ, ಯಾವುದೇ ಕಾಮಗಾರಿಗಳನ್ನು ಈ ಯೋಜನೆಯಲ್ಲಿ ಕಳೆದ ಮೂರು ವರ್ಷಗಳಿಂದ ಕೈಗೊಂಡಿರುವುದು ಕಂಡುಬರುವುದಿಲ್ಲ. ಎನ್.ಆರ್.ಇ.ಪಿ. ಯೋಜನೆ ಕಾಮಗಾರಿ ಸ್ಥಗಿತಗೊಂಡು ಪ್ರಾರಂಭಿಸಿದ ಕಾಮಗಾರಿಗಳನ್ನು ಸಂಪೂರ್ಣಗೊಳಿಸದೆ ಅರ್ಧದಲ್ಲಿಯೇ ನಿಲ್ಲಿಸಲಾಗಿದೆ. ಮತ್ತು ಆರ್.ಎಲ್.ಇ.ಜಿ.ಪಿ. ಜಿಲ್ಲಾ ಯೋಜನೆಯಲ್ಲಿ ಯಾವುದೇ ಕಾಮಗಾರಿಗಳನ್ನು ಕಳೆದ ಮೂರು ವರ್ಷಗಳಿಂದ ಕೈಗೆತ್ತಿಕೊಂಡಿರುವುದು ತಿಳಿದು ಬರುವುದಿಲ್ಲ. ಆದುದರಿಂದ ಈ ಮೇಲಿನ ಮೂರು ಯೋಜನೆಗಳಲ್ಲಿ ತಲಾ ೧೯೮೫-೮೬, ೧೯೮೬-೮೭ ೧೯೮೭-೮೮ ಮೂರು ವರ್ಷಗಳಿಂದ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು ? ರಾಜ್ಯ ಸರ್ಕಾರ ಖರ್ಚು ಮಾಡಿದ ಹಣವೆಷ್ಟು ? ಹಾಗೂ ಕಳೆದ ಮೂರು ವರ್ಷಗಳಿಂದ ಎನ್‌ಆರ್‌ಇಪಿ ಯೋಜನೆಯಲ್ಲಿ ರಾಜ್ಯ ಸರ್ಕಾರ ಹಾಕಿದ ಹಣವೆಷ್ಟು ? ಈ ಮೇಲಿನ ಯೋಜನೆಗಳಲ್ಲಿ ಕಾಮಗಾರಿಗಳನ್ನು ತೆಗೆದು ಕೊಳ್ಳದೆ, ಹಣವನ್ನು ಖರ್ಚು ಮಾಡದೆ ಇರಲು ಕಾರಣವೇನು ಎಂದು ತಿಳಿಯಲು ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಸದಸ್ಯರಿಗೆ ಉತ್ತರವನ್ನು ತರಿಸಿಕೊಡುತ್ತೇನೆ.

2 ಅಲ್ಪ ಸಂಖ್ಯಾತ ನಿಯೋಗದ ಶಿಫಾರಸ್‌ಗಳ ಬಗ್ಗೆ ಸರ್ಕಾರದ ನಿಲುವು

SRI MOHAMMED LAIQUDDIN.—Sir Minorities Commission has submitted two reports long back and some valuable recommendations are made by the Commission. What action the Government has taken on the recommendations of the Commission, particularly on the following recommendations.

1) Employment for Minorities particularly in Police Department and Education Department ;
2) Restoration of Wakfs property particularly Mosques ;
3) Improvement of Urdu language in the State ;
4) Improvement of economic status of Minorities in the State.

SRI G. BASAVANAPPA (Minister for Social Welfare).—Sir, the State Minorities Commission has presented two reports to the